ಶ್ರೀ ಎ. ಲಕ್ಷ್ಮೀಸಾಗರ್ (ನ್ಯಾಯ ಮತ್ತು ಸಂಸದೀಯ ವ್ಯವಹಾರ, ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ನಗರಾಭಿವೃದ್ಧಿ ಸಚಿವರು) --

ಅ) ಹುಬ್ಬಳ್ಳಿ-ಧಾರವಾಡದ ಸುತ್ತ ಮುತ್ತ ಹೆಚ್ಚಾಗಿ ಕರಿಮಣ್ಣಿನ ಜಮೀನುಗಳೇ ಇರುತ್ತವೆ, ಆದ್ದರಿಂದ, ನಗರದ ಬೆಳವಣಿಗೆಗೆ ಕರಿಮಣ್ಣಿನ ಪ್ರದೇಶಗಳನ್ನೂ ಸೇರಿಸಿ ಕೊಳ್ಳಬೇಕಾಗಿದೆ.

ಆ) ವಸತಿ ನಿವೇಶನ ನಿರ್ಮಾಣ ಹಾಗೂ ಉದ್ದಿಮೆಗಳಿಗೆ ಬೇಕಾಗುವ ಭೂಮಿಯ ವಿಸ್ತೀರ್ಣದ ಅಂದಾಜು ಇದೆ. ವ್ಯಾಪಕಾಭಿವೃದ್ಧಿ ಯೋಜನೆಯ ಪ್ರಕಾರ ೨೦೦೧ಕ್ಕೆ ವಸತಿ ನಿವೇಶನಕ್ಕಾಗಿ ೨೪೦೩-೪೪ ಹೆ. ಗಳು ಹಾಗೂ ಉದ್ದಿಮೆಗಾಗಿ ೧೯೬-೨೧ ಹೆ. ಪ್ರದೇಶ ಬೇಕಾಗುವುದು.

ಇ) ಮಹಾನಗರದ ಮಧ್ಯದಲ್ಲಿ ಸುಮಾರು ೧೧ ಗ್ರಾಮಗಳಿರುತ್ತವೆ. ಆ ಗ್ರಾಮಗಳಲ್ಲಿ ಖಾಲಿ ಜಮೀನುಗಳಿದ್ದು, ಅಲ್ಲಿರುವ ನಿವೇಶನಗಳನ್ನು ಕ್ರಮ ಬದ್ಧಗೊಳಿಸಬೇಕಾಗುತ್ತದೆ ಆ ಗ್ರಾಮದವರಿಗೆ ಹೆಚ್ಚು ನಿವೇಶನ ಬೇಕಾದಲ್ಲಿ ನಗರಾಭಿವೃದ್ಧಿ ಮಂಡಳಿ ಬಡಾವಣೆಗಳಲ್ಲಿ ನಿವೇಶನ ಕೊಳ್ಳಲು ಅವಕಾಶ ಇದೆ.

ಪರಿಶಿಷ್ಟ ಜನಾಂಗದವರಿಗಾಗಿ ಪ್ರತ್ಯೇಕ ಬಡಾವಣೆ ನಿರ್ಮಾಣ ಮಾಡುವ ಬಗ್ಗೆ

೬೯೬. ಎಂ.ಎಲ್. ಮುತ್ತಣ್ಣನವರ್ (ಗೋಕಾಕ್). --ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗೋಕಾಕ್ ತಾಲ್ಲೂಕಿನಲ್ಲಿ ಹರಿಜನ-ಗಿರಿಜನರಿಗಾಗಿ ಪ್ರತ್ಯೇಕವಾಗಿ ಬಡಾವಣೆಯನ್ನು ನಿರ್ಮಾಣ ಮಾಡುವ ಬಗ್ಗೆ ಸರ್ಕಾರ ಏನಾದರೂ ಇದೆಯೇ ?

ಆ) ಹಾಗಿದ್ದಲ್ಲಿ ಇಲ್ಲಿಯವರೆಗೆ ಏಕೆ ನಿರ್ಮಾಣ ಮಾಡಿರುವುದಿಲ್ಲ ? ಹಾಗೂ ಇದಕ್ಕೆ ಕಾರಣಗಳೇನು ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಮಂತ್ರಿಯವರು).--

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ವಾರಣಾಸಿಯಲ್ಲಿ ಕರ್ನಾಟಕ ಛತ್ರದ ನಿರ್ಮಾಣದ ಬಗ್ಗೆ

೬೫೩. ಶ್ರೀ ಎಂ. ಕೆ. ಕುಲಕರ್ಣಿ (ನವಲಗುಂದ) --ಮಾನ್ಯ ಕಂದಾಯ, ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉತ್ತರ ಪ್ರದೇಶದ ವಾರಣಾಸಿಯಲ್ಲಿ ಕರ್ನಾಟಕ ಸರ್ಕಾರವು ಛತ್ರವನ್ನು ಕಟ್ಟಿಸಲು ಉದ್ದೇಶಿಸಿದೆಯೇ ?

ಆ) ಹಾಗಿದ್ದಲ್ಲಿ ಈ ಉದ್ದೇಶಕ್ಕಾಗಿ ಹಣವೇನಾದರೂ ಬಿಡುಗಡೆ ಮಾಡಲಾಗಿದೆಯೇ ?

ಇ) ಹಣ ಬಿಡುಗಡೆ ಮಾಡಿದ್ದಲ್ಲಿ ಇದುವರೆಗೆ ನಿರ್ಮಾಣ ಕಾರ್ಯವನ್ನು ಕೈಗೊಳ್ಳದಿರಲು ಕಾರಣವೇನು ?

ಈ) ಯಾವಾಗ ಛತ್ರದ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲಾಗುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ(ಕಂದಾಯ, ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು) --

ಅ) ಉದ್ದೇಶಿಸಿದೆ.

ಆ) ಸರ್ಕಾರದ ಆದೇಶ ಸಂಖ್ಯೆ. ಆರ್‌ಡಿ ೩೨ ಎಂಎಲ್‌ಡಿ ೮೩, ದಿನಾಂಕ ೩೧-೩-೧೯೮೩ರಲ್ಲಿ ೩.೦೦ ಲಕ್ಷ ರೂ.ಗಳ ಧನಸಹಾಯ ಮಂಜೂರು ಮಾಡಿ ಬಿಡುಗಡೆ ಮಾಡಲಾಗಿದೆ.

ಇ) ಈ ಛತ್ರದ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲು ೩.೫೦ ಲಕ್ಷ ರೂ.ಗಳ ಅಂದಾಜು ಪಟ್ಟಿಯನ್ನು ತಯಾರಿಸಲಾಗಿತ್ತು, ಆದರೆ ಅಂದಾಜು ಪಟ್ಟಿಯ ದರಗಳು ಬದಲಾವಣೆ ಆದ್ದರಿಂದ, ೧೯೮೫-೮೬ರ ಷೆಡ್ಯೂಲ್ ಆಫ್ ರೇಟ್ಸ್ ಪ್ರಕಾರ ೯.೧೨ ಲಕ್ಷ ರೂಗೆ ಪರಿಷ್ಕರಿಸಲಾಗಿದ್ದು, ಪರಿಷ್ಕೃತ ಅಂದಾಜು ಪಟ್ಟಿಗೆ ಸರ್ಕಾರದ ಆದೇಶ ಸಂಖ್ಯೆ ಆರ್‌ಡಿ ೩೨ ಎಂಎಲ್‌ಡಿ ೮೫, ದಿನಾಂಕ ೩-೮-೧೯೮೫ರಲ್ಲಿ ಆಡಳಿತ ಮಂಜೂರಾತಿಯನ್ನು ನೀಡಲಾಯಿತು. ಪರಿಷ್ಕರಿಸಿದ ಅಂದಾಜು ಪಟ್ಟಿಯಂತೆ ನಿರ್ಮಾಣ ಕಾರ್ಯವನ್ನು ತೆಗೆದುಕೊಳ್ಳುವ ಬಗ್ಗೆ ಟೆಂಡರ್ ಕರೆದಿದ್ದು, ಟೆಂಡರ್ ದರಗಳು ಅಂದಾಜು ಪಟ್ಟಿಗಿಂತ ಹೆಚ್ಚಾಗಿದ್ದುದರಿಂದ ಮತ್ತೊಮ್ಮೆ ಟೆಂಡರ್ ಕರೆಯಲಾಯಿತು. ಈ ಟೆಂಡರಿಗೆ ಒಬ್ಬರೇ ಕಂಟ್ರಾಕ್ಟದಾರರು ಟೆಂಡರ್ ಹಾಕಿದ್ದು ಅದು ಶೇಕಡಾ ೬೮ರಷ್ಟು ಹೆಚ್ಚಾಗಿದ್ದು ಕಂಡು ಬಂತು. ಆದ್ದರಿಂದ ಇದನ್ನು ಒಪ್ಪಲಿಲ್ಲ. ಈಗ ಉತ್ತರ ಪ್ರದೇಶದ ಸರ್ಕಾರದ ಲೋಕೋಪಯೋಗಿ ಇಲಾಖೆಯ ಮತಿಯಿಂದ ಕೆಲಸ ಮಾಡಿಸುವ ಬಗ್ಗೆ ತೀರ್ಮಾನಿಸಿ ಉತ್ತರ ಪ್ರದೇಶ ಸರ್ಕಾರದ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಗಳಿಗೆ ಪತ್ರದ ಸಂಖ್ಯೆ ಪಿಡಬ್ಲ್ಯೂಡಿ ೨೫೯ ಬಿಎಂಡಿಎಸ್ ೮೬-೮೭,ದಿನಾಂಕ ೨೫-೬-೧೯೮೬ ರಂದು ಪತ್ರ ಬರೆಯಲಾಗಿದೆ. ಅವರಿಂದ ಉತ್ತರವನ್ನು ನಿರೀಕ್ಷಿಸಲಾಗಿದೆ.

ಈ) ಉತ್ತರ ಪ್ರದೇಶ ಸರ್ಕಾರದಿಂದ ಒಪ್ಪಿಗೆ ಪತ್ರ ಬಂದ ನಂತರ ಕೆಲಸ ಪ್ರಾರಂಭಿಸಲು ಸೂಚಿಸಲಾಗುವುದು.

ವೃದ್ಧಾಪ್ಯ ವೇತನ ಪ್ರಯೋಜನದಾರರಿಗೆ ೨-೩ ತಿಂಗಳಿಂದ ವಿತರಣೆ ಮಾಡಿರುವ ಬಗ್ಗೆ

೨೮೭. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).— ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿಕಾರಿಪುರ ತಾಲ್ಲೂಕಿನಲ್ಲಿ ವೃದ್ಧಾಪ್ಯ ವೇತನ ಮಂಜೂರಾದ ಪ್ರಯೋಜನದಾರರಿಗೆ ಕಳೆದ ಎರಡು ಮೂರು ತಿಂಗಳಿಂದ ಸಿಗದೆ ಇರುವುದು ಸರಕಾರದ ಗಮನಕ್ಕೆ ಬಂದಿದೆಯೆ ?

ಆ) ಟ್ರೈಜರಿಯಿಂದ ಹಣ ಕಳುಹಿಸಿದ್ದರೂ ಪೋಸ್ಟ್ ಆಫೀಸುಗಳಲ್ಲಿ ಅವರು ಸಂಬಂಧಪಟ್ಟವರಿಗೆ ಪೋಸ್ಟ್ ಮೂಲಕ ಮನಿಆರ್ಡರ್ ಮಾಡಿ ವಿತರಣೆ ಮಾಡದೆ ಇರುವುದು ನಿಜವೇ?

ಇ) ಹಾಗಿದ್ದಲ್ಲಿ ಈ ನ್ಯೂನತೆಯನ್ನು ಸರಿಪಡಿಸಲು ಸರಕಾರದವರು ಕ್ರಮ ಕೈಕೊಳ್ಳುವರೇ ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ಬಂದಿದೆ.

ಆ) ಇಂತಹ ಪ್ರಕರಣಗಳು ವರದಿಯಾಗಿರುವುದಿಲ್ಲಾ

ಇ) ಉದ್ಭವಿಸುವುದಿಲ್ಲ.

ಉಪ ಮಾರುಕಟ್ಟೆ ಪ್ರಾಣಿಂಗದ ಬಗ್ಗೆ

೫೦೪. ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ).— ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

೧) ಉಡುಪಿ ಉಪ ಮಾರುಕಟ್ಟೆ ಪ್ರಾಂಗಣವನ್ನು ಅಕ್ಟೋಬರ್ ೧೯೮೫ರಲ್ಲಿ ಉದ್ಘಾಟಿಸಿದ್ದರೂ ವ್ಯಾಪಾರ ಪಹಿವಾಟನ್ನು ನಡೆಸದೇ ಸರ್ಕಾರದ ಬೊಕ್ಕಸಕ್ಕೆ ಅಪಾರವಾದ ನಷ್ಟವುಂಟಾಗಿರುವುದು ನಿಜ ಸಂಗತಿಯೇ ?

೨) ಹಾಗಿದ್ದಲ್ಲಿ ಇದಕ್ಕೆ ಕಾರಣವೇನು ಹಾಗೂ ನಿಯಮಿತವಾದ ವ್ಯಾಪಾರದ ಪಹಿವಾಟನ್ನು ಯಾವಾಗಿನಿಂದ ನಡೆಸಲಾಗುವುದು ?